ನಿಮ್ಮೊಡನೆ

# ಗ್ರಾಮೀಣ ಆರ್ಥಿಕತೆಗೆ 'ನರೇಗಾ' ಅಂತರ್ಜಲ

'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ' ಗ್ರಾಮೀಣ ಅರ್ಥವ್ಯವಸ್ಥೆಗೆ ಅಂತರ್ಜಲದಂತೆ ಪರಿಣಮಿಸಿದೆ. ಈ ಯೋಜನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧತೆ ವ್ಯಕ್ತಪಡಿಸಬೇಕು ಹಾಗೂ ಸಂಪನ್ಮೂಲಗಳು ವ್ಯರ್ಥವಾಗದಂತೆ ತಡೆಯಬೇಕು.

ಕೊರೊನಾ ಸಂಕಷ್ಟದ ಕಾಲದಲ್ಲಿ ನಮ್ಮ ಗ್ರಾಮೀಣ ಅರ್ಥವ್ಯವಸ್ಥೆಗೆ ಆಸರೆಯಾಗಿ ಒದಗಿಬಂದಿದ್ದುಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ). ಕೋವಿಡ್‌ನಿಂದ ಅತಿಹೆಚ್ಚು ಬಾಧಿತರಾದದ್ದು ಅಸಂಘಟಿತ ವಲಯದ ಕಾರ್ಮಿಕರು. ಉದ್ಯೋಗ ಭದ್ರತೆ ಇಲ್ಲದ ಈ ವಲಯದ ದುಡಿಯುವ ಕೈಗಳಿಗೆ ಕಷ್ಟ ಕಾಲದಲ್ಲಿ ಕೆಲಸ ಕೊಟ್ಟು ಅವರನ್ನು ಹಸಿವಿನ ದವಡೆಯಿಂದ ಪಾರುಮಾಡಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಹಳ್ಳಿ ಬಿಟ್ಟು ನಗರ– ಪಟ್ಟಣಗಳಿಗೆ ವಲಸೆ ಬಂದಿದ್ದ ಅಸಂಖ್ಯಾತ ಜನರು ಕೊರೊನಾ ಕಾರಣದಿಂದ ಹಳ್ಳಿಗಳ ಕಡೆಗೆ ಮುಖ ಮಾಡಿದರು. ಭಣಗುಡುತ್ತಿದ್ದ ಹಳ್ಳಿಗಳು ಮತ್ತೆ ಜನರಿಂದ ತುಂಬಿದವು. ಬೀಳು ಬಿದ್ದಿದ್ದ ಜಮೀನುಗಳಲ್ಲಿ ಬೀಜ ಮೊಳೆಯುವಂತಾಯಿತು. ಭೂರಹಿತ ಕಾರ್ಮಿಕರಿಗೆ ಉದ್ಯೋಗ ಖಾತರಿ ಯೋಜನೆಯು ಕೆಲಸ ಒದಗಿಸಿತು. ಆದರೆ ಈ ಯೋಜನೆಯ ಮಹತ್ವ ಮನಗಾಣುವಲ್ಲಿ ನಮ್ಮ ಅಧಿಕಾರಸ್ಥರು ಸೋತರು. ಈ ಯೋಜನೆಗೆ ಬಜೆಟ್‌ನಲ್ಲಿ ಒದಗಿಸಿದ್ದ ಅನುದಾನವು ಆರ್ಥಿಕ ವರ್ಷ ಪೂರ್ಣಗೊಳ್ಳುವ ಐದು ತಿಂಗಳ ಮೊದಲೇ ಬರಿದಾಗಿದೆ. ಅಂದರೆ ಪೂರ್ತಿ ಬಳಕೆಯಾಗಿಹೋಗಿದೆ.

ಯೋಜನೆಗೆ ಈ ವರ್ಷದ ಬಜೆಟ್‌ನಲ್ಲಿ 73 ಸಾವಿರ ಕೋಟಿ ರೂಪಾಯಿ ಅನುದಾನ ತೆಗೆದಿರಿಸಲಾಗಿತ್ತು. ಅದರಲ್ಲಿ 17 ಸಾವಿರ ಕೋಟಿ ರೂಪಾಯಿ ಈ ಹಿಂದಿನ ವರ್ಷದ ಬಾಕಿ ಚುಕ್ತಾ ಮಾಡಲು ಬಳಕೆಯಾಗಿದೆ. ಯೋಜನೆಯ ವ್ಯಾಪ್ತಿ ವಿಸ್ತರಿಸಬೇಕು. ಯೋಜನೆಗೆ ಇನ್ನೂ ಹೆಚ್ಚಿನ ಅನುದಾನ ತೆಗೆದಿರಿಸಬೇಕು ಎಂಬ ಒತ್ತಾಯ ವಿವಿಧ ವಲಯಗಳಿಂದ ವ್ಯಕ್ತವಾದರೂ ಅದು ಹೆಚ್ಚಿನ ಪರಿಣಾಮ ಉಂಟುಮಾಡಲಿಲ್ಲ. ಹೀಗಾಗಿ ಒದಗಿಸಿರುವ ಅನುದಾನವು ಏಳು ತಿಂಗಳಿಗಷ್ಟೇ ಸಾಕಾಗಿದೆ.

ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಆರಂಭಿಸಿದ ಈ ಯೋಜನೆ ಬಗ್ಗೆ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಆರಂಭದಲ್ಲಿ ಹೆಚ್ಚಿನ ಒಲವು–ಉತ್ಸಾಹ ಇದ್ದಿರಲಿಲ್ಲವಾದರೂ ಯೋಜನೆಯನ್ನು ಸ್ಥಗಿತಗೊಳಿಸುವ ಹಂತಕ್ಕೆ ಹೋಗದೆ ಮುಂದುವರಿಸಿತು. ಗ್ರಾಮೀಣ ಭಾಗದಲ್ಲಿ ಯೋಜನೆಗೆ ಇದ್ದ ಜನಬೆಂಬಲದ ಕಾರಣಕ್ಕೆ ಇದನ್ನು ಉಳಿಸಿಕೊಂಡಿತು. ಯೋಜನೆ ಅನುಷ್ಠಾನದಲ್ಲಿನ ಲೋಪದೋಷಗಳ ಬಗೆಗೆ ವರದಿಗಳಿವೆ. ಆದರೆ ಗ್ರಾಮೀಣ ಜನರ ಸಂಕಷ್ಟ ನಿವಾರಣೆಯಲ್ಲಿ ಇದರ ಪಾತ್ರವನ್ನು ಕಡೆಗಣಿಸಲಾಗದು.

ಗ್ರಾಮೀಣ ಅರ್ಥವ್ಯವಸ್ಥೆಯು ಕಳೆದ ಕೆಲವು ವರ್ಷಗಳಿಂದ ತೀವ್ರ ಸಂಕಷ್ಟ ಎದುರಿಸುತ್ತಿದೆ. ಕೊರೊನಾ ಸಾಂಕ್ರಾಮಿಕ ಕಾರಣಕ್ಕೆ ಹೇರಿದ ಲಾಕ್‌ಡೌನ್, ಕೃಷಿಕರ ಕಷ್ಟವನ್ನು ಮತ್ತಷ್ಟು ಹೆಚ್ಚಿಸಿತು. ವಲಸೆ ಕಾರ್ಮಿಕರು ಹಳ್ಳಿಗಳಿಗೆ ವಾಪಸು ಹೋಗಿದ್ದರಿಂದ ಕುಟುಂಬಗಳ ಮೇಲೆ ಒತ್ತಡ ಹೆಚ್ಚಾಯಿತು. ಅಂತಹ ಸಂದರ್ಭದಲ್ಲಿ ದುಡಿಯುವ ಕೈಗಳಿಗೆ ತುರ್ತಾಗಿ ಕೆಲಸ ಬೇಕಿತ್ತು. ಆಗ ಆಸರೆಯಾಗಿ ಈ ಯೋಜನೆ ಒದಗಿಬಂದಿತು. ವಿಶೇಷವಾಗಿ ಗ್ರಾಮೀಣ ಮಹಿಳೆಯರಿಗೆ ವರದಾನವಾಗಿ ಪರಿಣಮಿಸಿತು. ಉದ್ಯೋಗಾವಕಾಶ ಒದಗಿಸಿಕೊಡುವುದರ ಜತೆಗೆ ಸಾರ್ವಜನಿಕ ಆಸ್ತಿ ಸೃಷ್ಟಿಸುವ ಕೆಲಸಕ್ಕೂ ಈ ಯೋಜನೆಯನ್ನು ಸರ್ಕಾರ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅವಕಾಶ ಇದೆ.

ಈ ಆರ್ಥಿಕ ವರ್ಷದ ಉಳಿದ ಅವಧಿಗೆ ಬಳಸಿಕೊಳ್ಳಲು ಅನುವಾಗುವಂತೆ ಸರ್ಕಾರ ಈ ಯೋಜನೆಗೆ ಉದಾರವಾಗಿ ಅನುದಾನ ಒದಗಿಸಬೇಕು. ಕೂಲಿ ಪಾವತಿಯಲ್ಲಿ ವಿಳಂಬ ಆಗುತ್ತಿರುವುದರ ಬಗೆಗೆ ಅಧ್ಯಯನ ವರದಿಗಳು ಬೆಳಕು ಚೆಲ್ಲಿವೆ. ಇದನ್ನು ತಪ್ಪಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸಕಾಲಕ್ಕೆ ಕೂಲಿ ಪಾವತಿ ಆಗುವಂತೆ ನೋಡಿಕೊಳ್ಳುವುದು ಅತ್ಯಂತ ಮಹತ್ವದ ಅಂಶ. ಈ ಯೋಜನೆಯ ಹಣವನ್ನು ದುರುಪಯೋಗ ಮಾಡಿಕೊಂಡ ಹಲವು ಹಗರಣಗಳು ಈ ಹಿಂದೆ ವರದಿಯಾಗಿದ್ದುಂಟು. ಒಂದು ಹೊತ್ತಿನ ಊಟಕ್ಕೂ ಚಿಂತಿಸುವ ಸ್ಥಿತಿಯಲ್ಲಿ ಮೌನವಾಗಿ ರೋದಿಸುತ್ತಿರುವಂತಹ ಬಡವರ ಕಣ್ಣೀರನ್ನು ಒರೆಸಲು ಮೀಸಲಿಟ್ಟ ಹಣದ ಪ್ರತೀ ಪೈಸೆ ಸದ್ವಿನಿಯೋಗ ಆಗುವಂತೆ ನೋಡಿಕೊಳ್ಳಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಸ್ಥಳೀಯವಾಗಿ ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಇದುವರೆಗಿನ ಆಡಳಿತಗಾರರು ವಿಫಲವಾಗಿದ್ದರ ಪರಿಣಾಮವಾಗಿ ನಗರಗಳಿಗೆ ವಲಸೆ ಹೆಚ್ಚಾಯಿತು. ಕೊರೊನಾ ವೈರಾಣು ಈಗ ತಂದಿರುವ ಸಂಕಷ್ಟವು ಹಳ್ಳಿಗಳನ್ನು ಹೊಸ ದೃಷ್ಟಿಕೋನದಿಂದ ನೋಡುವಂತಹ ಅವಕಾಶವೊಂದನ್ನು ಸೃಷ್ಟಿಸಿದೆ. ಕೃಷಿ ಜತೆಗೆ ಗುಡಿ ಕೈಗಾರಿಕೆಗಳನ್ನೂ ಉತ್ತೇಜಿಸುವ, ಆ ಮೂಲಕ ವಲಸೆಯನ್ನೂ ತಪ್ಪಿಸುವಂತಹ ಯೋಜನೆಗಳನ್ನು ರೂಪಿಸಲು ಇದು ಸಕಾಲ. ಗ್ರಾಮ ಸ್ವರಾಜ್ಯದ ಪರಿಕಲ್ಪನೆಗೆ ನವಚೇತನ ನೀಡಲು ಈಗಿನ ಸಂದರ್ಭವನ್ನು ಬಳಸಿಕೊಳ್ಳಬಹುದು. ಅಂತಹ ದೂರದರ್ಶಿತ್ವ ಪ್ರದರ್ಶಿಸಿದರೆ ವಲಸೆಗೂ ಕಡಿವಾಣ ಹಾಕಬಹುದು. ನಗರಗಳ ಮೇಲೆ ಬಿದ್ದಿರುವ ವಿಪರೀತ ಒತ್ತಡವನ್ನೂ ನಿವಾರಿಸಬಹುದು.

■ ಎನ್‌. ಉದಯಕುಮಾರ್



ಈಶ್ವರ್